**ರಾಮಲಿಂಗಾರೆಡ್ಡಿ**
ಸಾರಿಗೆ ಮತ್ತು ಮುಜರಾಯಿ ಸಚಿವರು
ಹಾಗೂ ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರು

ಕೊಠಡಿ ಸಂಖ್ಯೆ: 315-315ಎ,
3ನೇ ಮಹಡಿ, ವಿಧಾನಸೌಧ,
ಬೆಂಗಳೂರು - 560 001
ದೂರವಾಣಿ: 080-22252536,
22033450
ಇ-ಮೇಲ್: rlrtmmk@gmail.com

ಸಂಖ್ಯೆ: ಸಾಮುಸ/6410 /2024

ದಿನಾಂಕ: 28/10/2024

# ಟಿಪ್ಪಣಿ

**ವಿಷಯ**: ಬಿ.ಎಂ.ಟಿ.ಸಿ ಬಸ್ಸುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಚಾಲನಾ ಸಿಬ್ಬಂದಿಗಳ ಮೇಲೆ ಆಗುತ್ತಿರುವ ಹಲ್ಲೆ ಪ್ರಕರಣಗಳ ಕುರಿತು.

*****

ಇತ್ತೀಚಿನ ದಿನಗಳಲ್ಲಿ ಬಿ.ಎಂ.ಟಿ.ಸಿ ಬಸ್ಸುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಚಾಲನಾ ಸಿಬ್ಬಂದಿಗಳ ಮೇಲೆ ಸಾರ್ವಜನಿಕ ಪ್ರಯಾಣಿಕರು ಕ್ಷುಲ್ಲಕ / ವಿನಾ ಕಾರಣ ಹಲ್ಲೆ ಎಸಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಬಿ.ಎಂ.ಟಿ.ಸಿ ಬಸ್ಸುಗಳು ಬೆಂಗಳೂರು ನಗರದ ಜೀವ ನಾಡಿ, ಆ ಬಸ್ಸುಗಳಲ್ಲಿ ಕರ್ತವ್ಯ ನಿರ್ವಹಿಸುವ ನಮ್ಮ ಸಾರಿಗೆ ಸಂಸ್ಥೆಯ ಸಿಬ್ಬಂದಿಗಳು ಹಗಲಿರುಳು ಶ್ರಮವಹಿಸಿ ದುಡಿದು, ಸಾರ್ವಜನಿಕರಿಗೆ ಉತ್ತಮ ಸಾರಿಗೆ ಸೇವೆ ಒದಗಿಸುತ್ತಿದ್ದಾರೆ. ಆದರೆ ಕಳೆದೊಂದು ತಿಂಗಳಿನಲ್ಲಿ ನಮ್ಮ ಚಾಲನಾ ಸಿಬ್ಬಂದಿಗಳ ಮೇಲೆ ನಡೆದ ಹಲ್ಲೆ ಪ್ರಕರಣಗಳು ಸಿಬ್ಬಂದಿಗಳು ನಿರಾತಂಕವಾಗಿ ಕರ್ತವ್ಯ ನಿರ್ವಹಿಸಲು ಸಾಧ್ಯವಾಗದ ಭೀತಿಯನ್ನುಂಟು ಮಾಡಿದೆ.

**ಈ ಕೆಳಕಂಡ ಪ್ರಕರಣಗಳಲ್ಲಿ ಈಗಾಗಲೇ FIR ಕೂಡ ದಾಖಲಾಗಿದೆ.**

1. ದಿನಾಂಕ:01-10-2024, ಘಟಕ-13, ಕೆಎ-57 ಎಫ್-0015 ವಾಹನವು ಅನುಸೂಚಿ ಸಂಖ್ಯೆ.500-ಸಿಕೆ/13 ರಲ್ಲಿ ಆಚರಣೆಯಾಗುತ್ತಿದ್ದು, ಚಾಲಕರಾಗಿ ಶ್ರೀ ಸಿದ್ದಲಿಂಗಸ್ವಾಮಿ ಮತ್ತು ನಿರ್ವಾಹಕರಾಗಿ ಶ್ರೀ ಯೋಗೇಶ್, ಚಾಲಕ-ಕಂ-ನಿರ್ವಾಹ, ಬಿಲ್ಲೆಸಂಖ್ಯೆ.6899 ಕರ್ತವ್ಯ ನಿರ್ವಹಿಸುತ್ತಿದ್ದರು. ಸಂಜೆ 5.50 ರಲ್ಲಿ ಐಟಿಪಿಎಲ್ ಬಸ್ ನಿಲುಗಡೆಯ ಬಳಿ ವಾಹನದ ಮಧ್ಯದ ಬಾಗಿಲಿನ ಬಳಿ ನಿಂತಿದ್ದ ಶ್ರೀ ಹರ್ಷ ಸಿನ್ಹ ಎಂಬ ಪ್ರಯಾಣಿಕರಿಗೆ ನಿರ್ವಾಹಕರು ಸುರಕ್ಷತೆಯ ಹಿತದೃಷ್ಟಿಯಿಂದ ಬಸ್ಸಿನ ಒಳಗೆ ಬರುವಂತೆ ತಿಳಿಸಿರುತ್ತಾರೆ. ಇದರಿಂದ ಏಕಾಏಕಿ ಕೆರಳಿದ ಪ್ರಯಾಣಿಕರು ಹಿಂಸಾತ್ಮಕವಾಗಿ ವರ್ತಿಸಿ ಸಂಸ್ಥೆಯ ನಿರ್ವಾಹಕರ ಮೇಲೆ ಹಲ್ಲೆ ನಡೆಸಿದ್ದು, ಸಹ ಪ್ರಯಾಣಿಕರ ಮೇಲೆಯೂ ಸಹ ಹಲ್ಲೆ ಮಾಡಲು ಮುಂದಾಗಿ ಎಲ್ಲರೂ ತಕ್ಷಣ ಬಸ್ಸಿನಿಂದ ಕೆಳಗೆ ಇಳಿಯುವಂತೆ ತಾಕೀತು ಮಾಡಿರುತ್ತಾರೆ.

2. ದಿನಾಂಕ: 18-10-2024, ಘಟಕ-19, ಕೆಎ-57 ಎಫ್-1107 ವಾಹನವು ಅನುಸೂಚಿ ಸಂಖ್ಯೆ.500-ಇಬಿ/10 ರಲ್ಲಿ ಆಚರಣೆಯಾಗುತ್ತಿದ್ದು, ಮಧ್ಯಾಹ್ನ ಸುಮಾರು 2.30 ರ ಸಮಯದಲ್ಲಿ ಚಾಲಕ-ನಿರ್ವಾಹಕರು ಊಟ ಮಾಡುತ್ತಿದ್ದ ಸಮಯದಲ್ಲಿ ಶ್ರೀ ಹೇಮಂತ್ ಎಂಬುವವರು ನಿರ್ವಾಹಕರ ತಲೆಗೆ ಕಲ್ಲಿನಿಂದ ಹೊಡೆದು ಪರಾರಿಯಾಗಿದ್ದು, ಇತರೆ ಸಿಬ್ಬಂದಿಗಳ ಸಹಾಯದೊಂದಿಗೆ ಅವರನ್ನು ಹಿಡಿದು ಪೊಲೀಸ್ ಠಾಣೆಗೆ ಒಪ್ಪಿಸಲಾಗಿದೆ. ಪೊಲೀಸರು ವಿಚಾರಿಸಲಾಗಿ ಮೂರು ದಿನಗಳ ಹಿಂದೆ ಪಾಸು ತೋರಿಸುವ ವಿಚಾರವಾಗಿ ನಿರ್ವಾಹಕರೊಂದಿಗೆ ಮಾತಿನ ಚಕಮಕಿ ನಡೆದಿದ್ದು, ಇದನ್ನೇ ಮನಸ್ಸಿನಲ್ಲಿಟ್ಟುಕೊಂಡು ನಿರ್ವಾಹಕರ ಮೇಲೆ ಹಲ್ಲೆ ನಡೆಸಿರುವುದು ತಿಳಿದುಬಂದಿರುತ್ತದೆ.

**ರಾಮಲಿಂಗಾರೆಡ್ಡಿ**
ಸಾರಿಗೆ ಮತ್ತು ಮುಜರಾಯಿ ಸಚಿವರು
ಹಾಗೂ ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರು

ಕೊಠಡಿ ಸಂಖ್ಯೆ: 315-315ಎ,
3ನೇ ಮಹಡಿ, ವಿಧಾನಸೌಧ,
ಬೆಂಗಳೂರು – 560 001
ದೂರವಾಣಿ: 080-22252536,
22033450
ಇ-ಮೇಲ್: rlrtmmk@gmail.com

ಸಂಖ್ಯೆ: ಸಾಮುಸ/6410/2024 ದಿನಾಂಕ: 28/10/2024

3. ದಿನಾಂಕ:26-10-2024, ಘಟಕ-30, ವಾಹನ ಸಂಖ್ಯೆ.ಕೆಎ-51 ಎಹೆಚ್ 6033, ಅನುಸೂಚಿ ಸಂಖ್ಯೆ.290-ಇ/26 ರಲ್ಲಿ ಆಚರಣೆಯಾಗುತ್ತಿದ್ದು, ಚಾಲಕರಾಗಿ ಶ್ರೀ ಗಗನ್ (ಖಾಸಗಿ ಚಾಲಕ) ಮತ್ತು ನಿರ್ವಾಹಕರಾಗಿ ಶ್ರೀ ಶಿವಕುಮಾರ್, ಚಾಲಕ-ಕಂ-ನಿರ್ವಾಹಕ, ಬಿಲ್ಲೆ ಸಂಖ್ಯೆ.6631 ರವರು ಕರ್ತವ್ಯ ನಿರ್ವಹಿಸುತ್ತಿದ್ದರು. ವಾಹನವು ಯಲಹಂಕದಿಂದ ಶಿವಾಜಿನಗರಕ್ಕೆ ಬರುವಾಗ ಸಂಜೆ 5.25 ರಲ್ಲಿ ಟ್ಯಾನರಿ ರಸ್ತೆಯ ಕೆನರಾ ಬ್ಯಾಂಕ್ ಬಸ್ ನಿಲುಗಡೆಯಲ್ಲಿ ನಿಲ್ಲಿಸಿ ಪ್ರಯಾಣಿಕರನ್ನು ಇಳಿಸುವಾಗ ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು ವ್ಯಕ್ತಿಗಳು ಬಸ್ಸಿನ ಮುಂಭಾಗದಿಂದ ಬಸ್ಸಿಗೆ ಹತ್ತಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಚಾಲಕರ ಮೇಲೆ ಹಲ್ಲೆ ನಡೆಸಿದ್ದು, ಇದನ್ನು ಪ್ರಶ್ನಿಸಿದ ನಿರ್ವಾಹಕರನ್ನೂ ಸಹ ಎಳೆದಾಡಿ ಹಲ್ಲೆ ನಡೆಸಿದ್ದು, ಸಮೀಪದಲ್ಲಿದ್ದ ತನಿಖಾದಳ ಸಿಬ್ಬಂದಿಗಳು ಚಾಲಕ-ನಿರ್ವಾಹಕರಿಗೆ ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿಸಿರುತ್ತಾರೆ.

ಈ ರೀತಿಯ ಪ್ರಕರಣಗಳು ಮರುಕಳಿಸುವುದರಿಂದ ಸಂಸ್ಥೆಯ ನೌಕರರು ನಿರ್ಭೀತಿಯಿಂದ ಕರ್ತವ್ಯ ನಿರ್ವಹಿಸಲು ಸಾಧ್ಯವಾಗದ ವಾತಾವರಣ ನಿರ್ಮಾಣವಾಗುತ್ತಿರುವುದು ಖೇದಕರ.

ಆದ್ದರಿಂದ ಈ ಬಗ್ಗೆ ತಾವು ಗಮನಹರಿಸಿ, ಇಂತಹ ಪ್ರಕರಣಗಳಲ್ಲಿ ತಪ್ಪು ಎಸಗಿರುವ ವ್ಯಕ್ತಿಗಳ ಮೇಲೆ ಕಠಿಣ ಕ್ರಮ ಜರುಗಿಸಿ, ಮುಂದಿನ ದಿನಗಳಲ್ಲಿ ಈ ರೀತಿಯ ಪ್ರಕರಣಗಳು ನಡೆಯದಂತೆ ನಗರದ ಪೋಲಿಸ್ ಠಾಣೆಗಳ ಅಧಿಕಾರಿಗಳಿಗೆ ನಿರ್ದೇಶನ ನೀಡಿ, ಸಾರಿಗೆ ಸಿಬ್ಬಂದಿಗಳು ಒತ್ತಡ ಮುಕ್ತವಾಗಿ ಕರ್ತವ್ಯ ನಿರ್ವಹಿಸಲು ಅನುವು ಮಾಡಿಕೊಡುವಂತೆ ಕೋರಿದೆ.

**(ರಾಮಲಿಂಗಾರೆಡ್ಡಿ)**

**ಪೊಲೀಸ್ ಆಯುಕ್ತರು,**
ಬೆಂಗಳೂರು ನಗರ,
ಬೆಂಗಳೂರು.